ಡಾ: ಬಿ.ಆರ್.ಅಂಬೇಡ್ಕರ್ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದಉದ್ಯಮ)
೨ನೇ ಮಹಡಿ. ವಿಶ್ವೇಶ್ವರಯ್ಯಚಿಕ್ಕಗೋಪುರ, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು – 560001.
ದೂರವಾಣಿ ಸಂಖ್ಯೆ:080-22868870, 22867097, 22865192 ಫ್ಯಾಕ್ಸ್-080-22860396
e-mail:mdadcl2011@gmail.com

ಸಂಖ್ಯೆ:ಅಂಅನಿ/ಕೈ-ತ/ಸುತ್ತೋಲೆ/01/2017-18/ 2022-23 3512-3546 15/06/22 ದಿನಾಂಕ :09.06.2022

# ಸುತ್ತೋಲೆ

ವಿಷಯ: ಸರ್ಕಾರದ ಸಾಂಸ್ಥಿಕಾ ಹಾಗೂ ನಿರ್ದೇಶಕರ ಮಂಡಳಿ ಕೋಟಾದಡಿ ಮಂಜೂರಾತಿ ನೀಡುವ ಫಲಾಪೇಕ್ಷಿಗಳಿಗೆ ಮಾರ್ಗಸೂಚಿಗಳಂತೆ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ:

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಂತೆ ಸರ್ಕಾರದ ಸಾಂಸ್ಥಿಕಾ ಕೋಟಾ ಶೇ.15%ರಷ್ಟು ಹಾಗೂ ನಿರ್ದೇಶಕರ ಮಂಡಳಿಯ ವಿವೇಚನಾ ಕೋಟಾದಡಿ ಶೇ.5%ರಷ್ಟು ಗುರಿ ನಿಗದಿಪಡಿಸಿ ಮಂಜೂರಾತಿ ಆದೇಶಗಳನ್ನು ನೀಡಲಾಗುತ್ತಿದೆ. ಆದರೆ ಕೆಲವು ಜಿಲ್ಲಾ ವ್ಯವಸ್ಥಾಪಕರು ಕೇಂದ್ರ ಕಛೇರಿಯಿಂದ ಮಂಜೂರಾತಿ ನೀಡುವ ಫಲಾಪೇಕ್ಷಿಗಳ ಗಮನಕ್ಕೆ ತಿಳಿಸದೇ ಮಧ್ಯವರ್ತಿಗಳು ಹಾಗೂ ನಿಗಮದ ಕೆಲವು ಸಿಬ್ಬಂದಿಗಳು ಸೇರಿ ಬೇರೆ ಫಲಾಪೇಕ್ಷಿಗಳ ಹೆಸರುಗಳನ್ನು ಸೇರಿಸಿ ತಿದ್ದುಪಡಿ ಮಂಜೂರಾತಿ ಆದೇಶಕ್ಕೆ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುತ್ತಿರುವುದು ನಿಗಮ/ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣವನ್ನು ನಿಗಮವು ಗಂಭೀರವಾಗಿ ಪರಿಗಣಿಸಿ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಕೇಂದ್ರ ಕಛೇರಿ ಮಂಜೂರಾತಿ ಆದೇಶ ಪತ್ರಗಳನ್ನು ಜಿಲ್ಲಾ/ತಾಲ್ಲೂಕು ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸಿ ನಂತರ ಕೇಂದ್ರ ಕಚೇರಿಯ ವಾಟ್ಸಾಪ್ ಗ್ರೂಪ್‌ನಲ್ಲಿ ಹಾಕುವುದು ಕಡ್ಡಾಯವಾಗಿರುತ್ತದೆ. ಹಾಗೂ ಎಲ್ಲಾ ಫಲಾಪೇಕ್ಷಿಗಳಿಗೆ ನೋಂದಾಯಿತ ಅಂಚೆ ಮೂಲಕ ಮಾಹಿತಿ ನೀಡುವುದು. ಕೇಂದ್ರ ಕಛೇರಿ ಮಂಜೂರಾತಿ ಆದೇಶದಲ್ಲಿರುವ ಫಲಾಪೇಕ್ಷಿಗಳನ್ನು ಪೂರ್ಣ ಪ್ರಮಾಣದಲ್ಲಿ ನಿಯಮಾನುಸಾರ ಪರಿಗಣಿಸಿ ಯೋಜನೆ ಅನುಷ್ಠಾನಗೊಳಿಸುವುದು. ನಿಗಮವು ಈಗಾಗಲೇ ಯೋಜನೆಗಳಿಗೆ ತಕ್ಕಂತೆ ಮಾರ್ಗಸೂಚಿ ಹಾಗೂ ಸಾಮಾನ್ಯ ಅರ್ಹತೆ/ ನಿಯಮಗಳನ್ನು ಸಾಲ ಸೌಲಭ್ಯ ಕಲ್ಪಿಸುವ ಸಂಧರ್ಭದಲ್ಲಿ ಪರಿಗಣಿಸಬೇಕು.

1. ಒಂದು ವೇಳೆ ಫಲಾನುಭವಿ ಮರಣ ಹೊಂದಿದ್ದ ಪಕ್ಷದಲ್ಲಿ ಬದಲಾವಣೆ ಮಾಡಲಾಗುವುದು.
2. ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಯೋಜನೆಗೆ ಅನುಗುಣವಾಗಿ ವಯೋಮಿತಿ ಮೀರಿದ ಪಕ್ಷದಲ್ಲಿ ಬದಲಾವಣೆ ಮಾಡಲಾಗುವುದು.
3. ನಿಗಮದ ವ್ಯಾಪ್ತಿಯಲ್ಲಿ ಬರುವ ಜಾತಿ/ಉಪಜಾತಿಗಳಿಗೆ ಒಳಪಡದಿದ್ದ ಪಕ್ಷದಲ್ಲಿ ಬದಲಾವಣೆ ಮಾಡಲಾಗುವುದು.
4. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಸರ್ಕಾರವು ನಿಗದಿಪಡಿಸಿರುವ ಆದಾಯ ಮಿತಿಗಿಂತ ಹೆಚ್ಚಾದ ಪಕ್ಷದಲ್ಲಿ ಬದಲಾವಣೆ ಮಾಡಲಾಗುವುದು.
5. ಮಂಜೂರಾತಿ ನೀಡಿರುವ ಫಲಾಪೇಕ್ಷಿ ಹಾಗೂ ಇವರ ಕುಟುಂಬದವರು ಈ ಹಿಂದೆ ನಿಗಮದಲ್ಲಿ ಸಾಲ ಸೌಲಭ್ಯ ಪಡೆದಿದ್ದ ಪಕ್ಷದಲ್ಲಿ ಬದಲಾವಣೆ ಮಾಡಲಾಗುವುದು.
6. ಮಂಜೂರಾತಿ ನೀಡಿರುವ ಫಲಾಪೇಕ್ಷಿ ಹಾಗೂ ಇವರ ಕುಟುಂಬದಲ್ಲಿ ಯಾರಾದರೂ ಸರ್ಕಾರಿ ಹಾಗೂ ಅರೇ ಸರ್ಕಾರಿ ನೌಕರಿಯಲ್ಲಿದ್ದ ಪಕ್ಷದಲ್ಲಿ ಬದಲಾವಣೆ ಮಾಡಲಾಗುವುದು.
7. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಲ್ಲಿ ಬ್ಯಾಂಕಿನಿಂದ ಸಾಲ ಮಂಜೂರಾಗದ ಪ್ರಕರಣಗಳಲ್ಲಿ ಬದಲಾವಣೆ ಮಾಡಲಾಗುವುದು.



Scanned with OKEN Scanner

ಮೇಲ್ಕಂಡ ಸಂಧರ್ಭಗಳಲ್ಲಿ ಆಯ್ಕೆಯಾದ ಫಲಾಪೇಕ್ಷಿಗಳಿಗೆ ಸೂಕ್ತ ಹಿಂಬರಹ ನೀಡಿ ಸಂಬಂಧಿಸಿದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ವ್ಯವಸ್ಥಾಪಕರು ಹಾಗೂ ಉಪ ಪ್ರಧಾನ ವ್ಯವಸ್ಥಾಪಕರ ಸ್ಪಷ್ಟ ಶಿಫಾರಸ್ಸಿನೊಂದಿಗೆ ತಿದ್ದುಪಡಿ/ ಬದಲಾವಣೆ/ಮಾರ್ಪಾಡು ಆದೇಶಗಳಿಗೆ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು. ಈ ಪ್ರಕರಣಗಳನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವುದು. ವಿಳಂಬಕ್ಕೆ ಅವಕಾಶ ಕಲ್ಪಿಸದಂತೆ ಕ್ರಮ ವಹಿಸುವುದು ಜಿಲ್ಲಾ ವ್ಯವಸ್ಥಾಪಕರ ಕರ್ತವ್ಯವಾಗಿರುತ್ತದೆ. ನಿಮ್ಮ ಶಿಫಾರಸ್ಸಿನ ಪತ್ರಗಳ ಆಧಾರದ ಮೇಲೆ ಮಂಜೂರಾತಿ ಆದೇಶದಲ್ಲಿರುವ ಫಲಾಪೇಕ್ಷಿಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಕಛೇರಿಯಲ್ಲಿ ಕ್ರಮ ವಹಿಸಲಾಗುವುದು.

ಒಂದು ವೇಳೆ ನೀವು ಶಿಫಾರಸ್ಸು ಮಾಡಿದ ಪ್ರಕರಣಗಳಲ್ಲಿ ಯಾವುದೇ ನ್ಯೂನ್ಯತೆ/ಲೋಪದೋಷ/ನಿಯಮ ಉಲ್ಲಂಘನೆ/ದೂರುಗಳು/ತಪ್ಪು ಮಾಹಿತಿ ಕಂಡುಬಂದಲ್ಲಿ ಸಂಬಂಧಿಸಿದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಜಿಲ್ಲಾ ವ್ಯವಸ್ಥಾಪಕರು ಹಾಗೂ ಉಪ ಪ್ರಧಾನ ವ್ಯವಸ್ಥಾಪಕರುಗಳು ನೇರ ಹೊಣೆಗಾರರನ್ನಾಗಿ ಮಾಡಿ SCSP/TSP ಕಾಯ್ದೆ 2013 ಮತ್ತು ನಿಯಮಗಳು 2017ರ Section - 17ರಂತೆ ಹಾಗೂ ಕರ್ನಾಟಕ ನಾಗರೀಕ ಸೇವೆ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮಗಳನ್ವಯ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಅಂತಿಮವಾಗಿ ತಿಳಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಗೆ,
ಜಿಲ್ಲಾ ವ್ಯವಸ್ಥಾಪಕರು,
ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ
____________________ ಜಿಲ್ಲೆ.

**ಪ್ರತಿಯನ್ನು :**

1. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಡಾ.ಬಿ.ಆರ್. ಅಂಬೇಡ್ಕರ್ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕೇಂದ್ರ ಕಛೇರಿ ಬೆಂಗಳೂರು ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು ಕೋರಲಾಗಿದೆ.
2. ಉಪ ಪ್ರಧಾನ ವ್ಯವಸ್ಥಾಪಕರುಗಳು, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು/ಮೈಸೂರು/ಬೆಳಗಾವಿ/ ಕಲಬುರಗಿ ಉಪ ವಿಭಾಗರವರ ಮಾಹಿತಿಗಾಗಿ ಹಾಗೂ ಇಂತಹ ಪ್ರಕರಣದಲ್ಲಿ ತಮ್ಮ ಶಿಫಾರಸ್ಸು ಕೂಡ ಅವಶ್ಯಕವಾಗಿದ್ದು, ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಶಿಫಾರಸ್ಸು ಮಾಡಲು ಸೂಚಿಸಿದೆ.
3. ಕಛೇರಿ ಪ್ರತಿ.

Scanned with OKEN Scanner

ON FLODER\SAMTHIKAKOTA-1\General Letter.docx

# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

......................................... ಜಿಲ್ಲೆ

## ರ್ಕಾರದ ಸಾಂಸ್ಥಿಕ ಕೋಟಾ ಹಾಗೂ ನಿರ್ದೇಶಕ ಮಂಡಳಿಯ ಕೋಟಾದಡಿ ಮಂಜೂರಾತಿ ನೀಡಿದ ಫಲಾಪೇಕ್ಷಿಯ ಬದಲಾವಣೆ /ಮಾರ್ಪಾಡು ಮಾಡುವ ಬಗ್ಗೆ ಸ್ಥಳ/ದಾಖಲಾತಿ ಪರಿಶೀಲನಾ ವರದಿ

ತಾಲ್ಲೂಕು: ಗ್ರಾಮ: ದಿನಾಂಕ:

| | | |
|---|---|---|
| 1 | ಸ್ಥಳ ಪರಿಶೀಲನಾ ವಿವರ ಹಾಗೂ ಸಮಯ | |
| 2 | ಸ್ಥಳ ಪರಿಶೀಲನೆ ಮಾಡಿದ ಅಧಿಕಾರಿಯ ಹೆಸರು ಹುದ್ದೆ | |
| 3 | ಯೋಜನೆ ಹೆಸರು ಮತ್ತು ಉದ್ದೇಶ | |
| 4 | ಫಲಾಪೇಕ್ಷಿಯ ಹೆಸರು | |
| 5 | ಕೇಂದ್ರ ಕಛೇರಿಯ ಮಂಜೂರಾತಿ ಆದೇಶ ಸಂಖ್ಯೆ:<br>ದಿನಾಂಕ :<br>(ಆದೇಶ ಪ್ರತಿ ಲಗತ್ತಿಸುವುದು) | |
| 6 | ಫಲಾಪೇಕ್ಷಿಯ ಜಾತಿ /ಉಪಜಾತಿ | |
| 7 | ಮಂಜೂರಾತಿ ನೀಡಿರುವ ಫಲಾಪೇಕ್ಷಿಯನ್ನು ತಿರಸ್ಕರಿಸಲು ಕಾರಣಗಳು | • ಫಲಾಪೇಕ್ಷಿಯು ಮರಣ ಹೊಂದಿರುತ್ತಾರೆ.<br>• ಫಲಾಪೇಕ್ಷಿಯ ವಯೋಮಿತಿ ಮೀರಿರುತ್ತಾರೆ.<br>• ನಿಗಮದ ಜಾತಿ/ಉಪ ಜಾತಿಗೆ ಒಳಪಡುವುದಿಲ್ಲ.<br>• ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಮಿತಿ ಹೆಚ್ಚಾಗಿರುತ್ತದೆ.<br>• ಅರ್ಜಿದಾರರು/ಕುಟುಂಬದವರು ಈ ಹಿಂದೆ ನಿಗಮದಿಂದ ಸಾಲ ಸೌಲಭ್ಯ ಪಡೆದಿರುತ್ತಾರೆ.<br>• ಅರ್ಜಿದಾರರು/ಕುಟುಂಬದವರು ಸರ್ಕಾರಿ/ಅರೆ ಸರ್ಕಾರಿ ನೌಕರಿಯಲ್ಲಿ ಇರುತ್ತಾರೆ.<br>• ಅರ್ಜಿದಾರರ ಸಾಲದ ಪ್ರಸ್ತಾವನೆ ಬ್ಯಾಂಕುಗಳಿಂದ ತಿರಸ್ಕೃತ ಗೊಂಡಿರುತ್ತದೆ.<br>• ಇತರೇ ಕಾರಣಗಳು |

ಪು.ತಿ.ನೋ...2/-

| | | |
|---|---|---|
| 8 | ಫಲಾಪೇಕ್ಷಿಗೆ ತಿಳುವಳಿಕೆ ಪತ್ರ ನೀಡಲಾಗಿದೆಯೇ/ ಪರಿಶೀಲಿಸಿ ಹಿಂಬರಹ ನೀಡಲಾಗಿದೆಯೇ? | ಹೌದು/ಇಲ್ಲ |
| 9 | ಸ್ಥಳ ಪರಿಶೀಲನೆ ಮಾಡಿದ ಅಧಿಕಾರಿಯ ಸಂಕ್ಷಿಪ್ತ ವರದಿ ಹಾಗೂ ಶಿಫಾರಸ್ಸು | |
| 10 | ಜಿಲ್ಲಾ ವ್ಯವಸ್ಥಾಪಕರ ಸಂಕ್ಷಿಪ್ತ ವರದಿ ಹಾಗೂ ಶಿಫಾರಸ್ಸು | |
| 11 | ಉಪ ಪ್ರಧಾನ ವ್ಯವಸ್ಥಾಪಕರ ಸಂಕ್ಷಿಪ್ತ ವರದಿ ಹಾಗೂ ಶಿಫಾರಸ್ಸು | |

ತಾಲ್ಲೂಕು ಅಭಿವೃದ್ಧಿ ಅಧಿಕಾರಿ
ಹೆಸರು ಸಹಿ/ಮೊಹರು

ಜಿಲ್ಲಾ ವ್ಯವಸ್ಥಾಪಕರು
ಹೆಸರು ಸಹಿ/ಮೊಹರು

ಉಪ ಪ್ರಧಾನ ವ್ಯವಸ್ಥಾಪಕರು
ಹೆಸರು ಸಹಿ/ಮೊಹರು

Scanned with OKEN Scanner